O.S.No.: 229/2023

PW.:1

**ದಿಃ 27-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ Sri.RNR ವಕೀಲರಿಂದಃ**

ಪ್ರತಿವಾದಿ ಮುತ್ತಪ್ಪ ಹೊಲ ಬರೆದುಕೊಟ್ಟಿದ್ದು ಅವನು ಕೊಡದ ಕಾರಣ ಸದರಿ ದಾವೆ ಹೂಡಿರುತ್ತೇನೆ. ದಾವಾ ಆಸ್ತಿಯ ಸರ್ವೇ ನಂ.31/8 ಇರುತ್ತದೆ. ದಾವಾ ಆಸ್ತಿಯ ಸುತ್ತ ಮುತ್ತ ಹೊಸಮನೆಯವರ ಹೊಲ ಹಾಗೂ ಕೆಳಗೆ ದೇವರಮನೆಯವರ ಹೊಲ ಇವೆ. ದಾವಾ ಆಸ್ತಿ ಒಟ್ಟು 20 ಗುಂಟೆ ಇರುತ್ತದೆ. ನಾನು ಧರ್ಮಟ್ಟಿಯಲ್ಲಿ ಇರುತ್ತೇನೆ ಎಂದರೆ ಸರಿ. ಅಡಿವೆಪ್ಪ ನನ್ನ ಪತಿ ಎಂದರೆ ಸರಿ. ಪ್ರತಿವಾದಿ ನನ್ನ ಮೈದುನ ಎಂದರೆ ಸರಿ. ಧರ್ಮಟ್ಟಿಯಲ್ಲಿ ಬಡ್ಡಿವ್ಯವಹಾರ ಇದೆ ಎಂದರೆ ಸರಿಯಲ್ಲ. ಹಣದ ಸಮಸ್ಯೆ ಇದ್ದಾಗ ಬಡ್ಡಿಯಂತೆ ಹಣ ಕೊಡುತ್ತಾರೆ ಎಂದರೆ ಸರಿಯಲ್ಲ. ಹಣದ ಅಡಚಣೆ ಇದ್ದಾಗ ಹಣ ಕೊಟ್ಟು ಆಸ್ತಿ ಬರೆಸಿಕೊಳ್ಳುತ್ತಾರೆ ಎಂದರೆ ಸರಿ. ನಾವು ಸುಮಾರು 20 ವರ್ಷಗಳಿಂದ ಧರ್ಮಟ್ಟಿಯಲ್ಲಿ ಬಡ್ಡಿ ವ್ಯವಹಾರ ಮಾಡುತ್ತೇವೆ ಎಂದರೆ ಸರಿಯಲ್ಲ.

ಪ್ರತಿವಾದಿಗೆ ರೂ.4 ಲಕ್ಷ 30 ಸಾವಿರ ಕೊಟ್ಟಿರುತ್ತೇನೆ. ಪ್ರತಿವಾದಿಗೆ ರೂ.4 ಲಕ್ಷ 30 ಸಾವಿರ ಒಂದೇ ಬಾರಿ ಕೊಟ್ಟಿರುತ್ತೇನೆ. ನಾನು ಪ್ರತಿವಾದಿಗೆ ಜನವರಿ 22 ರಂದು ಹಣ ಕೊಟ್ಟಿದ್ದು ಯಾವ ಇಸ್ವಿ ಎಂದು ಹೇಳಲು ಬರುವುದಿಲ್ಲ. ಪ್ರತಿವಾದಿಗೆ ಹಣವನ್ನು ಗೋಕಾಕನಲ್ಲಿ ಕೊಟ್ಟಿರುತ್ತೇನೆ. ಪ್ರತಿವಾದಿಯ ಸಾಲ ತೀರಿಸಲು ಹಣ ಅಡಚಣೆ ಇದೆ ಎಂದು ನನ್ನ ಬಳಿ ಬಂದಿದ್ದನು. ಖರೀದಿ ಕರಾರು ಪತ್ರ ಆಗುವ ಮೊದಲು ಮಾತುಕತೆ ಯಾವ ತಾರೀಖಿನಂದು ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ, ಸಾಕ್ಷಿಯು ಮುಂದುವರೆದು ನಾನು ಶಾಲೆ ಕಲಿತಿರುವುದಿಲ್ಲ ಎಂದು ನುಡಿಯುತ್ತಾರೆ. ಖರೀದಿ ಪತ್ರವನ್ನು 3 ವರ್ಷದೊಳಗೆ ಮಾಡಿಕೊಡಬೇಕೆಂದು ಮಾತಾಗಿರುತ್ತದೆ. ನಿಪಿ-2 ನ್ನು ಗೋಕಾಕದ ತಹಶೀಲ್ದಾರ ಕಚೇರಿಯಲ್ಲಿ ಹಿರೇಮಠ ರವರು ಬರೆದಿರುತ್ತಾರೆ. ನಿಪಿ-2 ನ್ನು ಬರೆಯಲು ಮಾಹಿತಿ ಪ್ರತಿವಾದಿ ಕೊಟ್ಟಿರುತ್ತಾನೆ. ನನ್ನ ಹಾಗೂ ಪ್ರತಿವಾದಿಯ ಮಧ್ಯೆ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನಿಂದ ಯಾವುದೇ ಹಣ ತೆಗೆದುಕೊಂಡಿಲ್ಲ ಎಂದರೆ ಸಯಲ್ಲ.

ಆ ರೀತಿ ಯಾವುದೇ ವ್ಯವಹಾರ ಆಗಿಲ್ಲದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಹಾಗೂ ಮುತ್ತೆಪ್ಪ ಬೇರೆಯಾಗಿ ಸುಮಾರು 30 ವರ್ಷಗಳಾಗಿವೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ನಾವು ಕುಡಿಯೇ ಇದ್ದು ಪ್ರತಿವಾದಿಗೆ ಹೊಲ ಅಲ್ಲಿ ಮಾಡಿ ಕೊಟ್ಟಿರುತ್ತೇವೆಂದು ನುಡಿಯುತ್ತಾರೆ. ನನ್ನ ಗಂಡ ಹಾಗೂ ಪ್ರತಿವಾದಿ ಮಾತನಾಡುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ

ಅಕ್ಕ ಲಕ್ಷ್ಮೀ ಎಂದರೆ ಸರಿ. ಸದರಿ ಲಕ್ಷ್ಮೀಯವರ ಗಂಡ ಶಿವಾನಂದ ಗೋರಬಾಳ ಎಂದರೆ ಸರಿ. ದಾವಾ ಆಸ್ತಿಯನ್ನು ಶಿವಾನಂದ ಗೋರಬಾಳ ರವರಿಗೆ ಕೊಟ್ಟು, ಪ್ರತಿವಾದಿಯಿಂದ ನಿಪಿ-2 ನ್ನು ಬರೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಶಿವಾನಂದ ಗೋರಬಾಳ ಹಣ ಸಂಪೂರ್ಣ ಮರು ಪಾವತಿ ಮಾಡಿರುತ್ತಾನೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಹಣ ಕೊಡದ ಕಾರಣ ದಾವೆ ಹೂಡಿರುತ್ತೇನೆ ಎಂದು ಹೇಳಿರುತ್ತಾಳೆ. ಶಿವಾನಂದ ಗೋರಬಾಳ ಹಣ ಮರುಪಾವತಿ ಮಾಡಿದ್ದು ನಿಪಿ-2 ನ್ನು ರದ್ದು ಪಡಿಸಲು ಕರೆದಿದ್ದು ಹೆಚ್ಚಿನ ಬಡ್ಡಿ ಕೇಳಿ ನೀವು ಹೋಗಿಲ್ಲ ಎಂದರೆ ಸರಿಯಲ್ಲ. ನಿಪಿ-2 ರ ರದ್ದತಿಗಾಗಿ ಮನೆಗೆ ಬಂದು ಸಾಕಷ್ಟು ಬಾರಿ ಕರೆದಿರುತ್ತಾರೆ ಎಂದರೆ ಸರಿಯಲ್ಲ.

ನಾನು ಹಾಗೂ ನನ್ನ ಗಂಡ ಸೇರಿ ಪ್ರತಿವಾದಿಯ ವಿರುದ್ಧ ಖೊಟ್ಟಿ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಯ ಹೆಂಡತಿ ಮುತ್ತೆವ್ವ ಎಂದರೆ ಸರಿ. ಸದರಿ ಮುತ್ತೆವ್ವ ದಾವಾ ಆಸ್ತಿಯಲ್ಲಿ ಪಾಲು ಕೋರಿ ಇದೇ ನ್ಯಾಯಾಲಯದಲ್ಲಿ ವಾಟ್ನಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ನಂ.259/2023 ಅಂತಾ ದಾವಾ ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ನಂ.259/2023 ರಲ್ಲಿ ನೀವು ಹಾಜರಾಗಿರುತ್ತೀರಿ ಎಂದರೆ ಇಲ್ಲ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನ್ಯಾಯಯುತವಾದ ದೃಷ್ಟಿಯಿಂದ ಸಮಯ ನೀಡಲಾಯಿತು.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ. ದಂ.,
ಮೂಡಲಗಿ.